IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ವಚನಕಾರ್ತಿಯರು ಮತ್ತು ಆರ್ಥಿಕತೆ

**Dr. Neelambika Policepatil**
Principal
Godutai Doddappa Appa Arts & Commerce
Degree College for Women, Kalaburagi

'ಭಕ್ತರು ಕಾಯಕವೆಂದು ದಾಯಗಾರಿಕೆಯಲ್ಲಿ ತಂದು'
ದಾಸೋಹವ ಮಾಡಬಹುದೆ?
ಒಮ್ಮನವ ತಂದು ಒಮ್ಮನದಲ್ಲಿಯೇ ಮಾಡಿ
ಇಮ್ಮನವಾಗದ ಮುನ್ನವೆ
ಮಾರಯ್ಯಪ್ರಿಯ ಅಮಲೇಶ್ವರಲಿಂಗಕ್ಕೆ
ಸಲ್ಲಬೇಕು ಮಾರಯ್ಯಾ.-೧

ಇದು ಶಿವಶರಣೆಯರ ಕಾಯಕ ಸಿದ್ಧಾಂತ. ಏಕನಿಷ್ಠರಾಗಿ ಕೆಲಸ ಮಾಡಿ ಶ್ರದ್ಧೆಯಿಂದ ದಾಸೋಹವು ಮಾಡುವದು ಅವರ ಕಾಯಕವಾಗಿತ್ತು. ಕಾಯಕವನ್ನು ಧರ್ಮವೆಂದು ತಿಳಿದು ಅದನ್ನು ಆಚರಿಸಿದವರು ಶಿವಶರಣೆಯರು. ಅದಕ್ಕೆ ದ್ರೋಹ ಬಗೆದರೆ ಪರಮಾತ್ಮನಿಗೆ ದ್ರೋಹ ಬಗೆದಂತೆ ಎಂಬ ಧರ್ಮ ಹಿಡಿದು ಹೊರಟರು.

ಗುರು, ಲಿಂಗ ಜಂಗಮರಿಗೂ ಕಾಯಕವನ್ನು ಕಡ್ಡಾಯಗೊಳಿಸಿದವರು ಬಸವಾದಿ ಪ್ರಮಥರು ಕುಳಿತು ತಿನ್ನುವ ಹಕ್ಕು ಯಾರಿಗೂ ಇಲ್ಲ. ಎಲ್ಲರೂ ಕಾಯಕವನ್ನು ಮಾಡಲೇಬೇಕೆಂದು ಸಾರಿದರು. ಇದಕ್ಕೆ ಶಿವಶರಣೆಯರು ಹೊರತಾಗಲಿಲ್ಲ.

ಅಂದು ಬಸವಾದಿ ಶರಣರ ಇಡೀ ಚಳುವಳಿಯ ಮೂಲ ಕಾಯಕ ತತ್ವ. ಕುಳಿತುಣ್ಣುವ ಹಕ್ಕು ಯಾರಿಗೂ ಇರುವದಿಲ್ಲ. ದುಡಿದುಂಡರೆ ವ್ಯಕ್ತಿ ದೊಡ್ಡವನಾಗುವವನಲ್ಲದೆ ಸಮಾಜವು ದೊಡ್ಡದಾಗುತ್ತದೆಂಬ ಸದುದ್ದೇಶದಿಂದ ಕಾಯಕ ಸಿದ್ಧಾಂತವನ್ನು ಕಾನೂನು ರೀತಿಯಾಗಿ ಬಲಪಡಿಸಿದರು. ಅವರ ಕಾಯಕ ತತ್ವದಲ್ಲಿ ಸುಖವಿದೆ, ಶಾಂತಿಯಿದೆ, ಸಮಾನತೆಯ ಭಾವವಿದೆ. ಎಲ್ಲದಕ್ಕೂ ಹೆಚ್ಚಾಗಿ ಕಾಯಕದಲ್ಲಿ ಶರಣರಿಗೆ ಮೇಲು ಕೀಳು ಭಾವನೆ ಬರಲಿಲ್ಲ. ಯಾವುದು ದೊಡ್ಡದೆನಿಸಲಿಲ್ಲ, ಯಾವುದು ಚಿಕ್ಕದೆನಿಸಲಿಲ್ಲ ಏಕೆಂದರೆ ಹೆಚ್ಚು ಗಳಿಸಿ ಕೂಡಿಡಬೇಕೆಂಬ ಹಪಾಹಪಿ ಅವರಲ್ಲಿ ಇಲ್ಲದ ಕಾರಣ ಎಲ್ಲ ಕಾಯಕಗಳು ಅವರಿಗೆ ಸಮಾನವಾದವು. ಪ್ರಧಾನಮಂತ್ರಿಯಾಗಿರುವ ಬಸವಣ್ಣನವರ ಬಾಳು ಹೇಗಿತ್ತೆಂದರೆ ಅತ್ಯಂತ ಸರಳ ರೀತಿಯದಾಗಿತ್ತು. ಎಂತಹ ಸಾಮಾನ್ಯರು ಕೂಡಾ ಅನುಸರಿಸಲು ಸಾಧ್ಯವಾಗಿತ್ತು. ಅಂತೆಯೇ ಅವರು ಯಾವ ಸ್ಥಿತಿಯಲ್ಲಿದ್ದರೂ ಒಂದೇ ವಿಚಾರವುಳ್ಳವರಾಗಿದ್ದರು. ಇದು ಅವರ ಕಾಯಕದ ಸಮಾನತೆ. ಈ ಕಾಯಕದ ಪರಿಕಲ್ಪನೆಯಲ್ಲಿ ಸ್ತ್ರೀಯರು ಮುಂಚೂಣಿಯಲ್ಲಿದ್ದರು. ಪ್ರತಿಯೊಬ್ಬ ಶರಣೆ ತಾನು ಒಂದು ಕಾಯಕವನ್ನು ಮಾಡಿದಳು. ಬಹುಶಃ ಈ ಶಿವಶರಣೆಯರಿಂದಲೆ ಬಸವಣ್ಣನವರ ಕಾಯಕ ತತ್ವ ಪ್ರಸಿದ್ಧಿ ಪಡೆಯಿತು. ಆಯ್ದಕ್ಕಿ ಲಕ್ಕಮ್ಮ, ಮೋಳಿಗೆ ಮಹಾದೇವಿ ಮುಂತಾದ ಶಿವಶರಣೆಯರು ಸ್ವರ್ಗವನ್ನು ಸಹ ನಿರಾಕರಿಸಿದರು ಕಾಯದ ಎದುರಿರುವಾಗ.

ಹಾದರ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ 'ಆವ ಕಾಯಕವಾದಡೂ ಒಂದೇ ಕಾಯಕವಯ್ಯಾ' ಎನ್ನುತ್ತಾಳೆ. ಬಾಚಿಕಾಯಕದ ಕಾಳವ್ವೆ 'ಕಾಯಕ ತಪ್ಪಿದೆಡೆ ಸೈರಿಸಬಾರದು' ಎಂದು ಎಚ್ಚರಿಸುತ್ತಾಳೆ. ಹೀಗೆ ಮಾಡುತ್ತಾ ಕಾಯಕಕ್ಕೆ ಶಿವಶರಣೆಯರು ಎಂದೂ ಚ್ಯುತಿ ತಂದುಕೊಳ್ಳಲಿಲ್ಲ. ಅದಕ್ಕಾಗಿ ಅವರಿಗೆ ಕಾಯಕವೇ ಕೈಲಾಸವಾಯಿತು.

ಶಿವಶರಣೆಯರು ಇದಕ್ಕೆ ಹೊರತಾಗಿರಲಿಲ್ಲ. ಹೆಣ್ಣು ಕೂಡಾ ದುಡಿಯಲೇಬೇಕು ಎಂಬ ಕಟ್ಟುನಿಟ್ಟಿನ ಆದೇಶವನ್ನು ಅವರು ಪಾಲಿಸಿಕೊಂಡು ಬಂದರು. ಅವರ ಕಾಯಕದ ಪರಿಕಲ್ಪನೆ ಕೇವಲ ಅವರ ಸಂಸಾರಕ್ಕಷ್ಟೇ ಸೀಮಿತಗೊಂಡಿರಲಿಲ್ಲ. ಅದು ಸಾಮಾಜಿಕ ಪ್ರಗತಿಗೆ ಬೆನ್ನಾಸರೆಯಾಗಿ ಆಧ್ಯಾತ್ಮಿಕ ಸಾಧನೆಗೆ ಪ್ರಾಣದುಸಿರಾಯಿತು. ಯಾವುದೇ ಸಮಾಜದ ಬಲಾಢ್ಯತೆಗೆ ಅದರ ಆರ್ಥಿಕತೆ ಅಷ್ಟೇ ಪ್ರಬಲವಾದ ಕಾರಣವಾಗಿದೆ. ಹಣ ಇಲ್ಲದೆ ಏನು ನಡೆಯುವುದಿಲ್ಲ.ಅದು ಇದ್ದಾಗ ಮಾತ್ರ ಸಾಮಾಜಿಕ ಪ್ರಗತಿ ಸಾಧ್ಯವಿದೆ ಎಂಬುದು ಎಲ್ಲರೂ ಅರಿತ ವಿಷಯವೇ ಸರಿ. ಆದರೆ ಒಮ್ಮೊಮ್ಮೆ ಅದರ ಅವನತಿಗೂ ಈ ಆರ್ಥಿಕ ಮಾರ್ಗ ಕಾರಣವಾಗಿದೆ. ಅಂತಹ ಅನೇಕ ಉದಾಹರಣೆಗಳನ್ನು ನಾವು ಇತಿಹಾಸದಲ್ಲಿ ಕಾಣುತ್ತೆವೆ. ಆರ್ಥಿಕ ಅಸಮಾನತೆ ಎಲ್ಲಾ ಅಸಮಾನತೆಗೆ ತಾಯಿ ಬೇರು. ಸದ್ಯದ ಭಾರತದಲ್ಲಿ ಅದನ್ನು ನೋಡುತ್ತಿದ್ದೇವೆ. ಬಹುಶಃ ಬಸವಾದಿ ಶರಣರ ಕಾಲದ ಸಂದರ್ಭದಲ್ಲಿಯೂ ಈ ಅವ್ಯವಸ್ಥೆ ಇರುವದರಿಂದಲೆ ಅವರು ಕಾಯಕ ತತ್ವವನ್ನು ಹುಟ್ಟುಹಾಕಿ ಅದಕ್ಕೆ ಪಾರಮಾರ್ಥಿಕ ಅರ್ಥ ನೀಡಿ ಅದರ ಹಿರಿಮೆಯನ್ನು ಎತ್ತಿ ತೋರಿಸಿದರು. ನಿಜವಾದ ಅರ್ಥದಲ್ಲಿ ಕಲ್ಯಾಣ ರಾಜ್ಯ ನಿರ್ಮಾಣದಾತರು ಅವರು..ಏಕೆಂದರೆ ಅವರ ಆರ್ಥಿಕ ತತ್ವಗಳಲ್ಲಿ ಕಂಡು ಬರುವ ಮುಖ್ಯ ಅಂಶಗಳೆಂದರೆ

೧] ಪ್ರತಿಯೊಬ್ಬರು ಸಮಾಜಮುಖಿ ಕಾಯಕ ಕೈಗೊಳ್ಳಲೆಬೇಕು

೧) ಎಲ್ಲಾ ಕಾಯಕಗಳು ಸಮಾನವಾಗಿವೆ ಎಂಬ ಅರಿವುಳ್ಳವರಾಗಿರಬೇಕು

೨) ಕಾಯಕಗೈಯುವಾಗ ಭಾವನೆ ಶುದ್ಧಾಗಿರಬೇಕು

೩) ನನಗಾಗಿ ಮಾತ್ರವಲ್ಲ, ಇದು ಸಮಾಜಕ್ಕೆ ಸಲ್ಲಬೇಕು ಎಂಬ ಎಚ್ಚರಿಕೆಯು ಇರಬೇಕು.

ಈ ಮೊದಲಾದ ಕೆಲವು ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಶರಣರು ಕಾಯಕ ತತ್ವವನ್ನು ಪ್ರತಿಪಾದಿಸಿದ್ದು ಕಾಣುತ್ತೇವೆ.

ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ,ಮೋಕ್ಷ ಇವುಗಳ ಸ್ಥಾನ ಭಾರತದ ಸಮಾಜದಲ್ಲಿ ಹೆಚ್ಚು ಮಹತ್ವ ಪಡೆದಿದ್ದವಾದರು ಅವು ಅಧರ್ಮದ ಹಾದಿ ಹಿಡಿದಾಗ ಶರಣರು ಅವುಗಳನ್ನು ಶುಚಿಗೊಳಸಿದರು.ಹಣ ಮತ್ತು ಹೆಣ್ಣಿನ ಬಗ್ಗೆ ಶರಣರು ಕೀಳು ಎಂಬ ಭಾವನೆಯಿಂದ ಎಂದು ಕಂಡಿಲ್ಲ. ಬದಲಿಗೆ ಅವೆರೆಡರ ಪ್ರಾಮುಖ್ಯತೆಯನ್ನು ತೋರಿಸಿ ಕೊಟ್ಟರು. "ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ, ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ, ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ ಮನದ ಮುಂದಣ ಆಸೆಯೇ ಮಾಯೆ "ಎಂಬ ಅಲ್ಲಮಪ್ರಭು ದೇವರ ಮಾತು ಎಲ್ಲರನ್ನು ಚಿಂತನೆಗೆ ಹಚ್ಚಿತು. ಮೇಲಿನ ಮೂರು ವಿಷಯಗಳ ಮಾಯೆ ಹೆಚ್ಚಾದಾಗ ಅವು ವಿಷಕಾರಿಯಾಗುತ್ತವೆ ಎಂಬ ಎಚ್ಚರಿಕೆಯನ್ನು ಸಹ ಶರಣರು ನೀಡಿದರು.

ಶರಣರ ಈ ಕಾಯಕ ತತ್ವ ಈಗಾಗಲೇ ಹೇಳಿದಂತೆ ಅದು ಕಾಲಿಕವಾದುದಲ್ಲ, ಅದು ಸಾರ್ವತ್ರಿಕ ಎನ್ನುತ್ತಾರೆ ಚಿಂತಕ ಬಿ.ಶೇಷಾದ್ರಿಯವರು. ಮುಂದುವರಿದು ಇಂದಿನ ಕಪ್ಪು ಮಾರುಕಟ್ಟೆ, ಕಪ್ಪು ಹಣ, ಹಣದುಬ್ಬರ, ನಾನು ನೀನು ಎಂಬ ಭಾವನೆ ಶೋಷಣೆ , ನಿರುದ್ಯೋಗ ಸಮಸ್ಯೆ, ಬಡತನ ಭೀಕರತೆ ಇವುಗಳ ಮಧ್ಯೆ ಸಿಕ್ಕು ಜರ್ಜರಿತವಾಗುತ್ತಿರುವ ಭಾರತದಂತಹ ರಾಷ್ಟಗಳಿಗೆ ಶರಣರ ಕಾಯಕ ಸಿದ್ಧಾಂತದ ಪ್ರಜ್ಞೆಯೇ ರಾಮ ಬಾಣ ಎನ್ನುತ್ತಾರೆ. ಸರ್ವರ ಉದ್ಧಾರವು ಅದರಲ್ಲಿ ಅಡಗಿದೆ. ಶರಣರು ತಮ್ಮ ಕಾಯಕ ತತ್ವದಲ್ಲಿ ಸತ್ಯ ಶುದ್ಧತೆಗೆ ಹೆಚ್ಚಿನ ಗಮನ ನೀಡಿದ್ದಾರೆ. ಮಾಡುವ ಕಾಯಕ ಯಾವುದೆ ಇರಲಿ ಅದರ ಉದ್ದೇಶ ಮತ್ತು ರೀತಿ ಪರಿಶುದ್ಧವಾಗಿರಬೇಕು. ತ್ರಿವಿಧ ದಾಸೋಹ ಅದರ ಉದ್ದೇಶವಾದರೆ ಮಾಡುವ ರೀತಿ ಶುದ್ಧಾಗಿರಬೇಕು. ಕಾಯ ಬಳಲಿಸಿ, ಭಾವ ಶುದ್ಧವಾಗಿರಿಸಿ ಮಾಡಬೇಕೆಂಬುದಾಗಿತ್ತು. ಆಯ್ದಕ್ಕಿ ಲಕ್ಕಮ್ಮಳ ಈ ಮಾತು ಕೇಳಿ,

ಕಾಯಕ ನಿಂದಿತ್ತು ಹೋಗಯ್ಯಾ ಎನ್ನಾಳ್ದನೆ.

ಭಾವಶುದ್ಧವಾಗಿ ಮಹಾಶರಣರ ತಿಪ್ಪೆಯ ತಪ್ಪಲ ಅಕ್ಕಿಯ ತಂದು

ನಿಶ್ಚೈಸಿ ಮಾಡಬೇಕು ಮಾರಯ್ಯ ಪ್ರಿಯ ಅಮಲೇಶ್ವರ ಲಿಂಗಕ್ಕೆ

ಬೇಗ ಹೋಗು ಮಾರಯ್ಯ–೨

ಭಾವ ಶುದ್ಧವಾಗಿರಿಸಿಕೊಂಡು ತರಲು ಗಂಡನಿಗೆ ಹೇಳುತ್ತಾಳೆ. ಈ ಭಾವ ಶುದ್ಧತೆಯಿರದೆ ಹೋದರೆ ಇಡೀ ಸಾಮಾಜಿಕ ಸ್ವಾಸ್ಥ್ಯ ಕೆಡುವದಲ್ಲದೆ ಸಮಾಜದ ಶಾಂತಿಗೆ ಧಕ್ಕೆ ಬರಬಹುದೆಂಬ ಕಕ್ಕುಲತೆ ಅವಳಲ್ಲಿದೆ. ಅಂತೆಯೆ ಮೊದಲೆ ಗಂಡನಿಗೆ ಎಚ್ಚರಿಕೆಯು ಕೊಡುತ್ತಾಳೆ. ಕಾಯಕದ ಹಿಂದಿರುವ ಅವಳ ಮನೋಧರ್ಮ ಎಂತಹದೆಂಬುದನ್ನು ಸ್ಪಷ್ಟವಾಗಿ ಕಾಣುತ್ತೇವೆ. "ಮಾಡುವ ಮಾಟದಿಂದ ಮತ್ತೊಂದನ್ನರಿಯಬೇಕು "ಎಂಬ ಪ್ರಭುದೇವರ ಮಾತು ಎಲ್ಲಾ ಶರಣರಿಗೊಂದು ಮಾರ್ಗದರ್ಶನವಾಯಿತು. ಮಾಡುವ ಕಾಯಕ ಪಾರಮಾರ್ಥಿಕ ನೆಲೆಯನ್ನು ತೋರಿಸಿ ಕೊಡಬೇಕು. ಹೀಗೆಂದಾಗ ಅದರಲ್ಲಿ ನನಗಾಗಿ ಮಾತ್ರವಲ್ಲ ಶಿವನದು ಶಿವನಿಗೆ ಕೊಡಬೇಕು ಎಂಬ ಭಾವನೆಯೊಳು ಮಾಡಬೇಕು. ತನು,ಮನದೊಳು ಈ ಭಾವನೆ ಬಂದಾಗ ಸಹಜವಾಗಿ ಅವರು ಮಾಡುವ ಕಾಯಕ ಶುದ್ಧವಾದುದಾಗಿರುತ್ತದೆ. ತನ್ನ ಗಂಡ ಗಡಿಬಿಡಿಯಲ್ಲಿ ಹೆಚ್ಚಾಗಿ ಅಕ್ಕಿಯು ತಂದಾಗ ಲಕ್ಕಮ್ಮ ಆಡಿದಂತೆ ಮಾಡಿ ತೋರಿಸಿದಳು. "ನಮಗೆ ಎಂದಿನಂದವೆ ಸಾಕು ಮತ್ತೆ ಹೋಗಿ ಅಲ್ಲಿಯೆ ಸುರಿ. ಮಾರಯ್ಯ ಪ್ರಿಯ ಅಮಲೇಶ್ವರ ಲಿಂಗ ಕೊಟ್ಟ ಕಾಯಕವೇ ಸಾಕು ಮಾರಯ್ಯ "ಎನ್ನುವಲ್ಲಿ ಆ ತಾಯಿಗೆ ಇದ್ದ ಪ್ರಜ್ಞೆ ನಮ್ಮದಾಗಬೇಕು. ಹೊರಗೊಂದು ಒಳಗೊಂದು ಮಾಡುವದು ಕಾಯಕಕ್ಕೆ ಅನ್ಯಾಯ ಮಾಡಿದಂತಾಗುತ್ತದೆ. ಕಾಯಕದ ಅನ್ಯಾಯ ಅದು ದೇವರಿಗೆ ಮಾಡಿದ ಅನ್ಯಾಯ ಎನ್ನುವ ಎಚ್ಚರಿಕೆಯ ಘೋಷಣೆ ಇದೆ ಇಲ್ಲಿ. ಲಂಚದಿಂದ ವಂಚನೆ, ವಂಚನೆಯಿಂದ ಮತ್ತೊಂದು, ಮತ್ತೊಂದರಿಂದ ಮಗದೊಂದು ಹೀಗೆ ಅವುಗಳ ಸರಮಾಲೆಯೆ ಸಿದ್ಧಗೊಳ್ಳುತ್ತದೆ. ಅಂದಾಡಿದ ಸತ್ಯಕ್ಕಳ ಈ ಮಾತು ಇಂದಿನ ಸಮಾಜಕ್ಕೆ ಹಿಡಿದ ಕನ್ನಡಿ ಯಾಗಿದೆ. "ನೀವಿಕ್ಕಿದ ಭಿಕ್ಷೆಯೊಳಗಿಪ್ಪೆನು "––ಎನ್ನುವಲ್ಲಿ ಇದ್ದುದರಲ್ಲಿ ಬಾಳು, ಇನ್ನೊಬ್ಬರಿಗೂ ಬಾಳುವದಕ್ಕೆ ಅವಕಾಶ ಕೊಡು ಎನ್ನುವ ವಿಶಾಲವಾದ ಭಾವನೆ ಅಡಗಿದೆ

ಅಲ್ಲದೆ ಕಾಯಕದಿಂದ ಹೆಚ್ಚಿನಾಸೆ ಮಾಡದೆ ಇರುವದು ಅವರ ಕಾಯಕ ಸಿದ್ಧಾಂತದ ಪರಾಕಾಷ್ಠೆ, ಹೆಣ್ಣು 'ಆಶೆಬುರುಕಳು, ಅವಳು ವಸ್ತ್ರ ಒಡವೆಗಳನ್ನು ಪ್ರೀತಿಸುವವಳು ಎಂಬ ಹಳೆಯ ಮಾತನ್ನು ಸುಳ್ಳನಾಗಿಸಿದರು. ಆಯ್ದಕ್ಕಿ ಲಕ್ಕಮ್ಮ ಇದಕ್ಕೆ ಅಪ್ಪಟ ನಿದರ್ಶನ. ಗಂಡ ಮಾರಯ್ಯ ದಿನಕ್ಕಿಂತ ಹೆಚ್ಚಿಗೆ ಅಕ್ಕಿಯನ್ನು ಆಯ್ದುಕೊಂಡು ಬಂದಾಗ ಆಗ ಆಕೆ ಅಕ್ಕಿ ವಾಪಸ್ಸು ಕಳುಹಿಸಿದ ಉದಾಹರಣೆ ಹೆಮ್ಮೆಪಡುವಂತಹದು.

'ಆಸೆಯೆಂಬುದು ಅರಸಂಗಲ್ಲದೆ

ಶಿವಭಕ್ತರಿಗುಂಟೆ ಅಯ್ಯಾ?

ದೋಷವೆಂಬುದು ಯಮದೂತರಿಗಲ್ಲದೆ,

ಅಜಾತರಿಗುಂಟೆ ನಿಮಗೇಕೆ? ಈಶ್ವರನೊಪ್ಪ,

ಮಾರಯ್ಯಪ್ರಿಯ ಅಮಲೆಶ್ವರಲಿಂಗಕ್ಕೆ ದೂರ ಮಾರಯ್ಯ.–೩

ಶರಣಿ ಲಕ್ಕಮ್ಮನಲ್ಲಿರುವ ನೈತಿಕ ಪ್ರಜ್ಞೆ ಗಮನಿಸುವಂತಹದು ಅಂತಹ ನೈತಿಕ ಪ್ರಜ್ಞೆಯಿಂದಾಗಿಯೇ ಸುಸಮಾಜ ನಿರ್ಮಾಣವಾಯಿತು. ಸಾಮಾಜಿಕ ಶ್ರದ್ಧೆಯಿಂದ ಕಾಯಕದ ಬಹುಳತೆಯನ್ನು ಹೆಚ್ಚಿಸಿ, ತಮ್ಮ ನೈತಿಕ ಪ್ರಜ್ಞೆಯಿಂದ ಅದನ್ನು ಶುದ್ಧಗೊಳಸಿ ಜವಾಬ್ದಾರಿಯಿಂದ ಉತ್ತಮಗೊಳಸಿ ಆಧ್ಯಾತ್ಮಿಕ ದೃಷ್ಟಿಯಿಂದ ಉನ್ನತಗೊಳಸಿದ್ದರಿಂದಲೇ ಇಂದಿಗೂ ಆ ಕಾಯಕ ತತ್ವ ವಿಶ್ವಮಾನ್ಯವಾಗಿದೆ.

ಬಡತನದ ನಿವಾರಣೆಗೆ ಕಾಯಕತತ್ವ ದಿವ್ಯೌಷಧಿ. ಏಕೆಂದರೆ ಎಲ್ಲಿ ದುಡಿಮೆ ಇಲ್ಲವೊ ಆ ವ್ಯಕ್ತಿ ಸಮಾಜ ದೇಶಗಳೆಲ್ಲವು ಬಡತನ ವ್ಯಾಪ್ತಿಗೆ ತಳ್ಳಲ್ಪಟ್ಟಿರುತ್ತವೆ. ಹೀಗಾಗಿ ವಚನಕಾರ್ತಿಯರು ಒಂದೆಡೆ ಸೋಮಾರಿಗಳನ್ನು ಎಚ್ಚರಿಸಿ ಅವರನ್ನು ಕಾರ್ಯೋನ್ಮುಖಗೊಳಸಿದರು. 'ಭಕ್ತಂಗೆ ಬಡತನವುಂಟೆ" ಎಂದು ಕೇಳುವ ಲಕ್ಕಮ್ಮ

“ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ
ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ
ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು
ಮಾರಯ್ಯಪ್ರಿಯ ಅಮಲೇಶ್ವರಲಿಂಗದ ಸೇವೆಯುಳ್ಳನ್ನಕ್ಕರ.–೪

ಎಂದು ಹೇಳುತ್ತಾಳೆ. ನಿಜವಾದ ಬಡವರೆಂದರೆ ಮನ ಅಶುದ್ಧಗೊಂಡವರು. ಮನಶುದ್ಧ, ಚಿತ್ತಶುದ್ಧದಿಂದ ಕಾಯಕ ಮಾಡುವ ಭಕ್ತನಿಗೆ ಅದು ಕಾಡಲು ಸಾಧ್ಯವಿಲ್ಲ. ಅಂತಹ ಭಕ್ತನ ಅಂತರಂಗ ಬಹಿರಂಗಗಳೆರಡು ಶುದ್ಧವಾಗಿರುತ್ತವೆ ಎನ್ನುತ್ತಾಳೆ ಅಕ್ಕಮ್ಮ.

“ಅಸಿಮಸಿ ವಾಣಿಜ್ಯ ಮುಂತಾದ ಕಾಯಕವ ಮಾಡಿ,
ಭಕ್ತರ ಪಡುಗ, ಪಾದತ್ರಾಣ, ಪಹರಿ, ಬಾಗಿಲು, ಬೊಕ್ಕಸ, ಬಿಯಗ
ಮುಂತಾದ ಕಾಯಕವಂ ಮಾಡಿಕೊಂಡು
ವ್ರತಕ್ಕೆ ಊಣೆಯವಿಲ್ಲದೆ ಮಾಡು ಕೃತ್ಯಕ್ಕೆ ಕಡೆಯಾಗದೆ
ಈ ಭಕ್ತರ ಅಂಗಳ ಅವಿಮುಕ್ತಿ ಕ್ಷೇತ್ರ
ಆತನ ಮನೆಯೆ ಆಚಾರ ಪ್ರಾಣವಾದ ರಾಮೇಶ್ವರಲಿಂಗದಾಶ್ರಯ”–೫

ಶರಣರ ಕಾಯಕ ತತ್ವ ‘ಕಾಯ’ ಶಬ್ಧದಿಂದ ಪ್ರಾರಂಭಗೊಂಡಿದ್ದು. ಕಾಯದಿಂದ ನಡೆಯಬೇಕಾದ ಕ್ರಿಯೆ ಇದಾಗಿರುವದಲ್ಲದೆ, ಕಾಯ ಆರೋಗ್ಯವಾಗಿದ್ದಾಗಲೇ ಎಲ್ಲವೂ ಮಾಡಲು ಸಾಧ್ಯ. ಶರೀರ ಶುದ್ದ ಮತ್ತು ಆರೋಗ್ಯವಾಗಿದ್ದಾಗ ವಿಚಾರಗಳು ಶುದ್ಧ, ವಿಚಾರಗಳು ಶುದ್ಧವಾಗಿದ್ದಾಗ ಕಾಯಕ ಶುದ್ಧ, ಹೀಗಾಗಿ ಕಾಯ (ಶರೀರ) ಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟರು. ‘ಶರಣರ ಕಾಯ ವೃಥಾ ಸವೆಯಲಾಗದು’ ಎಂಬ ವಿಚಾರ ಅವರದಾಗಿತ್ತು. ‘ಪ್ರಸಾದ ಕಾಯ ಕೆಡಿಸಲಾಗದು’ ಎಂದು ಬಸವಣ್ಣನವರು ಹೇಳಿದ್ದು ಇದೇ ಅರ್ಥದಲ್ಲಿ ಅದಕ್ಕಾಗಿಯೇ ಅಕ್ಕಮ್ಮ ‘ತನ್ನ ಕಾಯ ಮನ ಅರಿದು ಮಾಡಿಕೊಂಬುದೆ ವೃತ’ ಎನ್ನುತ್ತಾಳೆ.

ಮುಂದುವರೆದು:

ತನುವೃತ ಮನವೃತ ಮಹಾಜ್ಞಾನವೃತ
ತ್ರಿಕರಣದಲ್ಲಿ ಶುದ್ಧವಾಗಿಯಲ್ಲದೆ ಕ್ರೀ ಶುದ್ಧವಿಲ್ಲ
ಕ್ರೀ ಶುದ್ಧವಾಗಿಯಲ್ಲದೆ ತನು ಶುದ್ಧವಿಲ್ಲ.
ತನು ಶುದ್ಧವಾಗಿಯಲ್ಲದೆ’ ಮನ ಶುದ್ಧವಿಲ್ಲ
ಮನ ಶುದ್ಧವಾಗಿಯಲ್ಲದೆ ಜ್ಞಾನ ಶುದ್ಧವಿಲ್ಲ
ಜ್ಞಾನ ಶುದ್ಧವಾಗಿ ನಿಂದು ಮಾಡಿಕೊಂಡ ನೇಮ ತಪ್ಪದೆ
ಶರಣರಿಗೆ ದೂರಿಲ್ಲದೆ, ಮನಕ್ಕೆ ಮರವೆ ಇಲ್ಲದೆ
ಮಹಾಜ್ಞಾನವೆ ವ್ರತ ನೇಮ ಲಿಂಗವಾಗಿ
ಶ್ರುತ ದೃಷ್ಟ ಅನುಮಾನಕ್ಕೆ ಅಗೋಚರವಾಗಿ ನಿಂದ
ಶೀಲವಂತನಿಂಗವೆ ಅಚಾರವೆ ಪ್ರಾಣವಾದ ರಾಮೇಶ್ವರಲಿಂಗ ಅಂಗ.–೬

ಎಂದು ಕಾಯ ಮತ್ತು ಕಾಯಕದ ಸಂಬಂಧ ಸ್ಪಷ್ಟಪಡಿಸುತ್ತಾಳೆ ಅಕ್ಕಮಹಾದೇವಿ ತಮ್ಮ ವಚನವೊಂದರಲ್ಲಿ ಕಾಯಕ ಮಾಡದೆ ಕಾಯ ಬಲಿತರ ಏನಾಗುವದೆಂಬುದನ್ನು ವೈದ್ಯೆಯಂತೆ ರೂಪಿಸುತ್ತಾಳೆ.

"ಆಹಾರವ ಕಿರಿದು ಮಾಡಿರಣ್ಣಾ, ಆಹಾರವ ಕಿರಿದು ಮಾಡಿ

ಆಹಾರದಿಂದ ವ್ಯಾಧಿ ಹಬ್ಬಿ ಬಲಿವುದಯ್ಯಾ

ಆಹಾರದಿಂದ ನಿದ್ರೆ, ನಿದ್ರೆಯಿಂ ತಾಮಸ, ಅಜ್ಞಾನ, ಮೈಮರಹು

ಅಜ್ಞಾನದಿಂ ಕಾಮವಿಕಾರ ಹೆಚ್ಚಿ

ಕಾಯವಿಕಾರ, ಮನೋವಿಕಾರ, ಇಂದ್ರಿಯವಿಕಾರ

ಭಾವವಿಕಾರ ವಾಯುವಿಕಾರವನುಂಟು ಮಾಡಿ

ಸೃಷ್ಟಿಗೆ ತಹುದಾದ ಕಾರಣ ಕಾಯಕ ಅತಿಪೀಷಣ ಬೇಡ

ಅತಿ ಪೋಷಣೆ ಮೃತ್ಯುವೆಂದುದು

ಜಪ ತಪ ಧ್ಯಾನ ಧಾರಣ ಪೂಜೆಗೆ ಸೂಕ್ಷ್ಮದಿಂ ತನುಮಾತ್ರವಿದ್ದರೆ ಸಾಲವೆ?

ತನುವ ಪೋಷಿಸುವ ಆಸೆ ಯತಿತ್ವಕ್ಕೆ ವಿಘ್ನವೆಂದುದು

ತನು ಪೋಷಣೆಯಿಂದ ತಾಮಸ ಹೆಚ್ಚಿ ಅಜ್ಞಾನದಿಂ ವಿರಕ್ತಿ ಹಾನಿ

ಅರಿವು ನಷ್ಟ, ಪರವು ದೂರ, ನಿರಕೆ ನಿಲವಿಲ್ಲದ ಕಾರಣ

ಚೆನ್ನಮಲ್ಲಿಕಾರ್ಜುನನೊಲಿಸ ಬಂದ ಕಾಯವ

ಕೆಡಿಸದ ಉಳಿಸಿಕೊಳ್ಳಿರಯ್ಯಾ–೭

'ಕಾಯಕವೇ ಕೈಲಾಸ' ತತ್ವದಲ್ಲಿ ಲೌಕಿಕ ಪಾರಮಾರ್ಥಿಕವೆರಡೂ ಸೇರಿದ್ದು ದೇವರ ಹೆಸರಿನಲ್ಲಿ ದುಡಿಯದೆ ತಿನ್ನುವ ಪ್ರವೃತ್ತಿಯನ್ನು ನಿಲ್ಲಿಸಿದರು. ಕಾಯಕ ಮೋಕ್ಷದ ಮಾರ್ಗವೆಂದು ಹೇಳಿ ಅಲ್ಲಿಯೇ ದೇವರನ್ನು ಕಂಡರು. ತಮ್ಮ ತಮ್ಮ ಕಾಯಕದಲ್ಲಿಯೇ ಶರಣಿಯರು ದೇವರನ್ನು ಕಂಡದ್ದು. ಪಾಪಿಯ ಹಣಕ್ಕೆ ಕೈ ಮುಟ್ಟಲಿಲ್ಲ. ಸತ್ಯಕ್ಕ ಧೈರ್ಯದಿಂದ ಆ ದೇವರಿಗೆ ಚಾಲೆಂಜ್ ಮಾಡುತ್ತಾಳೆ.

"ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ

ನಾನು ಕೈ ಮುಟ್ಟಿ ಎತ್ತಿದೆನಾದರೆ

ನಿಮ್ಮಾಣೆ ನಿಮ್ಮ ಪ್ರಮಥರಾಣೆ

ಅದೇನು ಕಾರಣವೆಂದರೆ ನೀವಿಕ್ಕಿದ ಭಿಕ್ಷೆದಲ್ಲಿಪ್ಪೆನಾಗಿ

ಇಂತಲ್ಲದೆ ನಾನು ಅಳಿಮನವ ಮಾಡಿ

ಪರದ್ರವ್ಯಕ್ಕೆ ಅಶೆ ಮಾಡಿದೆನಾದರೆ

ನೀನಾಗಲೆ ಎನ್ನ ನರಕದಲ್ಲಿ ಅದ್ದಿ

ನೀನೆದ್ದು ಹೋಗಾ ಶಂಭುಜಕ್ಕೇಶ್ವರಾ–೮

ಯಾವುದೇ ತರಹದ ಲಂಚಕ್ಕೆ ಕೈಚಾಚುವದಿಲ್ಲವೆಂಬ ಪ್ರತಿಜ್ಞೆ ಕೈಕೊಂಡವರು ಶರಣೆಯರು.

ಈ ಹಿಂದೆ ಹೇಳಿದಂತೆ ಕಾಯಕದಲ್ಲಿ ಆಧ್ಯಾತ್ಮಿಕತೆ ಇರುವದರಿಂದ ಶರಣರಿಗೆ ಅದು ಆನಂದ ನೀಡಿತೆ ಹೊರತು ಅದೊಂದು ಹೊರೆ ಎನಿಸಲಿಲ್ಲ. ಅದೊಂದು ಭಕ್ತಿ ಮಾರ್ಗವಾಯಿತು. ದೇವರನ್ನು ಕಾಣುವ ಉತ್ಕಟಾಸೆಯಿತು ಎನ್ನುವಂತಿಲ್ಲ. ಆಯ್ದಕ್ಕಿ ಲಕ್ಕಮ್ಮ.

'ಮಾಡುವ ಮಾಟವುಳ್ಳನ್ನಕ್ಕ ಬೇರೊಂದು ಪದವನರಸಲೇತಕ್ಕೆ

ದಾಸೋಹವೆಂಬ ಸೇವೆಯ ಬಿಟ್ಟು ನೀಸಲಾರದೆ

ಕೈಲಾಸವೆಂಬ ಆಸೆ ಬೇಡ

ಮಾರಯ್ಯಪ್ರಿಯ ಅಮಲೇಶ್ವರಲಿಂಗವಿದ್ದ ಠಾವೆ ಕೈಲಾಸ–೯

ಕೈಲಾಸವೇ ಬೇಡ ಎನ್ನುತ್ತಾಳೆ ಏಕೆಂದರೆ ಮರ್ತ್ಯದಲ್ಲಿರುವ ಕಾಯಕ, ದಾಸೋಹಗಳಗಿಂತ ಹೆಚ್ಚಿನ ಸುಖ ಕೈಲಾಸದಲ್ಲಿಲ್ಲ ಎನ್ನುವದು ಅವಳ ವಾದ.

ತಾವು ಮಾಡುವ ಕಾಯಕಕ್ಕೆ ಎಂದೂ ಚ್ಯುತಿ ತಂದುಕೊಳ್ಳಲಿಲ್ಲ ಆಸೆ –ನಿರಾಸೆಯಿಂದ ಅದನ್ನು ಕೈಗೊಳ್ಳಲಿಲ್ಲ. ಆತ್ಮ ಸಾಕ್ಷಿಯಾಗಿ ಆತ್ಮ ಸಂತೋಷಕ್ಕಾಗಿ ಮಾಡಿದರು.

'ಕಾಯಕ ತಪ್ಪಿದರೆ ಸೈರಿಸಬಾರದು
ವೃತ ತಪ್ಪಲೆಂದು ಸೈರಿಸಬಾರದು
ಕರ್ಮಹರ ಕಾಳೇಶ್ವರಾ–೧೦

ಎಂದು ಹೇಳುತ್ತಾಳೆ ಕಾಳವ್ವೆ. ಇಂತಹ ಕಾಯಕಕ್ಕೆ ಹೊತ್ತಾದಾಗ ಗಂಡನಿಗೆ ಬುದ್ಧಿ ಹೇಳಲು ಹಿಂಜರಿಯಲಿಲ್ಲ ಅವರು.

ಶರಣರು ತಮ್ಮ ಹೆಸರಿನ ಹಿಂದೆ ಮುಂದೆ ತಮ್ಮ ಅಡ್ಡ ಹೆಸರು, ತಮ್ಮ ಡಿಗ್ರಿಗಳನ್ನು ಬರೆದುಕೊಳ್ಳಲಿಲ್ಲ ಅವರ ಹೆಸರಿನ ಹಿಂದಿರುವ ವಿಶೇಷಣ ಅವರ ಕಾಯಕವನ್ನು ಸೂಚಿಸುತ್ತದೆ. ಇದು ಅವರ ಕಾಯಕ ಭಕ್ತಿ ಎತ್ತಿ ತೋರಿಸುತ್ತದೆ. ಶಿವಶರಣೆಯರ ಹೆಸರಿನ ಹಿಂದೆಯೂ ಕೂಡಾ ಇಂತಹ ವಿಶೇಷಣ ಕಾಣುತ್ತೇವೆ. ಕದಿರ ಕಾಯಕದ ಕಾಳವ್ವೆ, ಕದಿರ ರಮ್ಮವ್ವೆ, ಇವರಿಬ್ಬರೂ ಕದಿರ ಕಾಯಕ ಕೈಕೊಳ್ಳುತ್ತಿದ್ದರು. ಕದಿರವೆಂದರೆ ರಾಟಿಯಿಂದ ನೂಲುತೆಗೆಯುವ ಕಾಯಕ. ಕನ್ನಡಿ ಕಾಯಕದ ರೇವಮ್ಮ ಕನ್ನಡಿಗಳನ್ನು ಮಾರುವ ಕೆಲಸ ನಿರ್ವಹಿಸಿದ್ದರೆ, ಕಾಲಕಣ್ಣಿಯ ಕಾಮಮ್ಮ ಹಗ್ಗವನ್ನು ಹೊಸೆದು ಮಾರುವ ಕಾಯಕ ಕೈಗೊಂಡಿದ್ದಾಳೆ. ಕೊಟ್ಟಣದ ಸೋಮಮ್ಮ ಕೊಟ್ಟಣ ಕುಟ್ಟುವ ಕಾಯಕ ನಿರ್ವಹಿಸಿದ್ದಾಳೆ. ಅಕ್ಕಮ್ಮ ಒಕ್ಕಲುತನ ಕಾಯಕ ನಿರ್ವಹಿಸಿದ್ದಂತೆ ತೋರುತ್ತದೆ. ಮಹಾಮನೆಯಲ್ಲಿ ಅಕ್ಕಿ ಆಯುವ ಕಾಯಕ ಲಕ್ಕಮ್ಮ ಕೈಕೊಂಡರೆ ಸತ್ಯಕ್ಕ ಕಸಗೂಡಿಸಿದಳು. ಕೇತಲೆ ಗಡಿಗೆ ಮಾಡುವ ಕಾಯಕ ಕೈಕೊಂಡಳು, ಗೊಗ್ಗವ್ವೆ ಶಿವಭಕ್ತರಿಗೆ ಧೂಪ ಅರ್ಪಿಸುವ ಕಾಯಕದಲ್ಲಿ ತಲ್ಲೀನಳಾದರೆ, ದುಗ್ಗಳೆ ಬಟ್ಟೆ ನೇಯುವ ಕಾಯಕದಲ್ಲಿ ತೊಡಗಿದಳು. ಮುಕ್ತಾಯಕ್ಕ ಆಕಳು ಕಾಯ್ದರೆ, ಗೌರಮ್ಮ ಅನುಭವ ಮಂಟಪದಲ್ಲಿ ಶಿಸ್ತಿನ ಕಾಯಕ ನಿಭಾಯಿಸಿದಳು. ನೀಲಾಂಬಿಕೆ, ಗಂಗಾಂಬಿಕೆ, ಅಕ್ಕನಾಗಮ್ಮ ಮಹಾಮನೆಯ ಜವಾಬ್ದಾರಿಗಳನ್ನು ಹೊತ್ತಿದ್ದರು. ಹಾಡುವ ಕತೆ ಹೇಳುವ, ನಸುಕಿನಲ್ಲಿ ಶರಣರನ್ನು ಎಬ್ಬಿಸುವ, ಹೂಪತ್ರಿಗಳನ್ನು ಮನೆ ಮನೆಗೆ ಮುಟ್ಟಿಸುವ, ಈ ಮುಂತಾದ ಕಾಯಕಗಳನ್ನು ಕೈಕೊಂಡರೆ ಕೆಲವರು ಸಂಗೀತ ನೃತ್ಯದಂತಹ ಕಾಯಕಗಳನ್ನು ಕೈಕೊಂಡರು.

ಶಿವಶರಣೆಯರು ತಮ್ಮ ಕಾಯಕವನ್ನು ಆಧ್ಯಾತ್ಮಿಕತೆಯ ಹೊನಲಿನಲ್ಲಿ ಮಾಡಿರುವದರಿಂದ ಆ ಪ್ರಕಾರದಲ್ಲಿ ಧನ್ಯತೆ ಪಡೆದರು. ಅಂದರೆ ಕಾಯಕದ ಮಹತ್ವವನ್ನು ವಿವರಿಸುವಾಗ ಅದರ ಮುಖಾಂತ ಆಧ್ಯಾತ್ಮಿಕ ಅನುಭವ ಹಂಚಿಕೊಂಡಿದ್ದಾರೆ.

"ನಾ ತಿರುಹುವ ರಾಟಿಯ ಕುಲಜಾತಿಯ ಕೇಳರಣ್ಣಾ
ಅಡಿಯ ಹಲಗೆ ಬ್ರಹ್ಮ ತೋರಣ ವಿಷ್ಣು
ನಿಂದ ಬೊಂಬೆ ಮಹಾರುದ್ರ
ರುದ್ರನ ಬೆಂಬಳಿಯವೆರಡು ಸೂತ್ರಕರ್ಣ
ಅರಿವೆಂಬ ಕದಿರು ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿ
ಸುತ್ತಿತ್ತು ನೂಲು ಕದಿರು ತುಂಬಿತ್ತು
ರಾಟೆಯ ತಿರಹಲಾರೆ, ಎನ್ನ ಗಂಡ ಕುಟ್ಟಹ
ಇನ್ನವೆ ಕದಿರರೆಮ್ಮಿಯೊಡೆಯ ಗುಮ್ಮೇಶ್ವರಾ.–೧೧

ಕದಿರ ರೆಮ್ಮವ್ವೆಯ ವಚನವಿದು. ತನ್ನ ರಾಟಿಯಿಂದ ನೂಲು ತೆಗೆಯುವ ಕಾಯಕದ ವರ್ಣನೆಯೊಂದಿಗೆ ಆಧ್ಯಾತ್ಮಿಕ ಅನುಭವಗಳನ್ನು ಹಂಚಿಕೊಳ್ಳುವ ಆಕೆಯ ರೀತಿ ಮೆಚ್ಚುವಂತಹದು. ತಮ್ಮ ಕಾಯಕವನ್ನು ಅತ್ಯಂತ ಪೂಜ್ಯ ಭಾವನೆಯಿಂದ ಮಾಡಿದ್ದರು. ಅದು ಅವರಿಗೆ ದೇವರ ಪೂಜೆಗಿಂತಲೂ ಮೇಲಾಯಿತು. ಕಾಯಕ ಅವರಿಗೆ ಧರ್ಮವಾಯಿತು. ಬದುಕಿನ ನಿಯಮವಾಯಿತು. ಅವರ ಬದುಕಿಗೊಂದು ಸ್ಪಷ್ಟ ನಿಲುವನ್ನೊದಗಿತು. ಅವರ ಕೈಕೊಂಡ ಕಾಯಕದಲ್ಲಿ ಆಂತರಿಕ, ಬಾಹ್ಯ ಎರಡರಲ್ಲಿಯೂ ಸಂತೋಷವಿತ್ತು ಅವರು ಕಾಯಕದಿಂದ ಸತ್–ಚಿತ್ –ಆನಂದ ಪಡೆದರು.

"ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ
ಸತ್ಯಶುದ್ಧವಿಲ್ಲದುದು ಕಾಯಕವಲ್ಲ;
ಆಸೆಯೆಂಬುದು ಭವದ ಬೀಜ;
ನಿರಾಸೆಯೆಂಬುದು ನಿತ್ಯಮುಕ್ತಿ
ಉರಿಲಿಂಗಪೆದ್ದಿಗಳರಸನಲ್ಲ ಸದರವಲ್ಲ ಕಾಣವ್ವಾ– ೧೨

ಭಕ್ತರೆಂದರೆ ಕಾಯಕ ಮಾಡುವವರು. ಕಾಯಕ ಮಾಡದವರು ಭವಿಗಳು ಎನ್ನುವಲ್ಲಿ ಅವರ ಕಾಯಕದ ಪ್ರಾಮುಖ್ಯತೆ ಎದ್ದು ಕಾಣುತ್ತದೆ.

ಕಾಯಕವನ್ನನುಸರಿಸಿ 'ದಾಸೋಹ' ಶಬ್ದವನ್ನು ಅವರು ಬಳಕೆಯಲ್ಲಿ ತಂದು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡರು. ಕಾಯಕದ ನಿಜವಾದ ಆದರ್ಶವಿರುವದೇ ದಾಸೋಹದಲ್ಲಿ. ಶರಣರು ದುಡಿದದ್ದು ಆ ದುಡಿಮೆಯನ್ನು 'ದಾಸೋಹ' ಎಂಬ ಪರಿಕಲ್ಪನೆಯಲ್ಲಿ ವಿವರಿಸಿದರು. ಕೇವಲ ತಮಗಾಗಿ, ತಮ್ಮ ಮಡದಿ ಮಕ್ಕಳಗೆಂಬ ಸ್ವಾರ್ಥ ವಿಚಾರದಿಂದಿಲ್ಲ. ಅವರ ದಾಸೋಹದಲ್ಲಿ ತಾನು ಬದುಕಬೇಕು ಎಲ್ಲರೂ ಬದುಕಬೇಕೆಂಬ ಸದುದ್ದೇಶವಿತ್ತು. 'ದಾಸೋಹದ ಸೇವೆ ಮರ್ತ್ಯದಲ್ಲಿರುವಾಗ ಕೈಲಾಸವೇತಕ್ಕೆ? ಎನ್ನುತ್ತಾಳೆ ಲಕ್ಕಮ್ಮ. ಮೋಳಗೆ ಮಹಾದೇವಿ, ಮಾದಾರ ಚನ್ನಯ್ಯನ ಮಡದಿ ಗಂಗಮ್ಮ, ಆಯ್ದಕ್ಕಿ ಲಕ್ಕಮ್ಮ ನೀಲಾಂಬಿಕಾ, ಅಕ್ಕನಾಗಮ್ಮ ಮುಂತಾದ ಶಿವಶರಣಿಯರು ಮಾಡಿದ ದಾಸೋಹ ಅನುಪಮವಾಗಿದೆ. ಜನಪದ ಹಾಡುವಲ್ಲಿ ಇನ್ನೂ ಹಚ್ಚಹಸುರಾಗಿದೆ.

ಕಾಯಕಕ್ಕೆ ಅರ್ಥ ಬರುವದು ದಾಸೋಹದಿಂದ ಎನ್ನುತ್ತಾರೆ ಶಿವಶರಣಿಯರು ಕಾಯಕದ ಫಲ ದಾಸೋಹವಾಗಬೇಕು. ಆಗ ಮಾತ್ರ ಸಕಳಾರ್ಥಸಿದ್ಧಿ ಅಂತೆಯೇ ಶಿವಶರಣಿಯರು ದಾಸೋಹ ಮಾಡುವಲ್ಲಿ ಸಿದ್ಧಹಸ್ತರಾಗಿದ್ದರು. ಹೆಚ್ಚಿಗೆ ತಂದರೂ ಮನೆಯಲ್ಲಿ ಇಟ್ಟುಕೊಳ್ಳಲಾರದಷ್ಟು ಸ್ವಾಭಿಮಾನ ಅವರಲ್ಲಿತ್ತು. ಅವರ ಕಾಯಕದ ಮೇಲಿನ ವಿಶ್ವಾಸ ದೊಡ್ಡದಾಗಿತ್ತು. ಮೋಳಗೆ ಮಹಾದೇವಿ ಆಯ್ದಕ್ಕಿ ಲಕ್ಕಮ್ಮ, ಗಂಗಮ್ಮಾ ಮುಂತಾದವರು ಮಾಡಿದ ದಾಸೋಹ ಅನೇಕ ಕೃತಿಗಳಲ್ಲಿ ಮೂಡಿಬಂದಿದೆ.

## ಸಂದರ್ಭ ಸೂಚಿ ಗ್ರಂಥಗಳು :


೧] ಶಿವರಶರಣಿಯರ ವಚನ ಸಂಪುಟ– ಸಂ: ಡಾ॥ ವೀರಣ್ಣಾ ರಾಜೂರೆ– ವಚನ–೨೦ ಪುಟ–೨೦೩

೨] ಶಿವರಶರಣಿಯರ ವಚನ ಸಂಪುಟ– ಸಂ: ಡಾ॥ ವೀರಣ್ಣಾ ರಾಜೂರೆ– ವಚನ–೦೯ ಪುಟ–೨೦೦

೩] ಶಿವರಶರಣಿಯರ ವಚನ ಸಂಪುಟ– ಸಂ: ಡಾ॥ ವೀರಣ್ಣಾ ರಾಜೂರೆ– ವಚನ–೦೬ ಪುಟ–೨೦೦

೪] ಶಿವರಶರಣಿಯರ ವಚನ ಸಂಪುಟ– ಸಂ: ಡಾ॥ ವೀರಣ್ಣಾ ರಾಜೂರೆ– ವಚನ–೨೧ ಪುಟ– ೨೦೩

೫] ಶಿವರಶರಣಿಯರ ವಚನ ಸಂಪುಟ– ಸಂ: ಡಾ॥ ವೀರಣ್ಣಾ ರಾಜೂರೆ– ವಚನ–೧೧ ಪುಟ–೧೧೫

೬] ಶಿವರಶರಣಿಯರ ವಚನ ಸಂಪುಟ– ಸಂ: ಡಾ॥ ವೀರಣ್ಣಾ ರಾಜೂರೆ– ವಚನ–೬೦ ಪುಟ–೧೩೨

೭] ಶಿವರಶರಣಿಯರ ವಚನ ಸಂಪುಟ– ಸಂ: ಡಾ॥ ವೀರಣ್ಣಾ ರಾಜೂರೆ– ವಚನ–೫೮ ಪುಟ–೨೩

೮] ಶಿವರಶರಣಿಯರ ವಚನ ಸಂಪುಟ– ಸಂ: ಡಾ॥ ವೀರಣ್ಣಾ ರಾಜೂರೆ– ವಚನ– ೧೯ ಪುಟ–೩೧೪

೯] ಶಿವರಶರಣಿಯರ ವಚನ ಸಂಪುಟ– ಸಂ: ಡಾ॥ ವೀರಣ್ಣಾ ರಾಜೂರೆ– ವಚನ– ೨೩ ಪುಟ– ೨೦೪

೧೦] ಶಿವರಶರಣಿಯರ ವಚನ ಸಂಪುಟ– ಸಂ: ಡಾ॥ ವೀರಣ್ಣಾ ರಾಜೂರೆ– ವಚನ–೦೧ ಪುಟ–೮೪೧

೧೧] ಶಿವರಶರಣಿಯರ ವಚನ ಸಂಪುಟ– ಸಂ: ಡಾ॥ ವೀರಣ್ಣಾ ರಾಜೂರೆ– ವಚನ–೬೬೫ ಪುಟ–೨೧೨

೧೨] ಶಿವರಶರಣಿಯರ ವಚನ ಸಂಪುಟ– ಸಂ: ಡಾ॥ ವೀರಣ್ಣಾ ರಾಜೂರೆ– ವಚನ–೦೭ ಪುಟ–೨೦೬